b) Out of that number of Primary School Teachers? and number of S.C., S.T.

SRI M. RAGUPATHI (Minister for Education).—

a) 35 (Thirty Five)

b) 23 (Twenty Three) On the basis of Caste, Awards will not be given. Hence, S C., S.T. figures are not available.

೧೫೪೫. ಶ್ರೀ ಜಿ. ಎಸ್. ಆಚಾರ್, ಬ್ಲೋಷಿಯಂಸ್ ಡಿಸೋಜ ಮತ್ತು ಮಲ್ಲಿಕಾರ್ಜುನಖರ್ಗೆ (ಗುರುಮಿಂಟಿಕಲ್).—ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೇ ದಯವಿಟ್ಟು ಉತ್ತರಿಸುವರೆ?

ಅ) ದ್ವಿತೀಯ ಪಿ.ಯು.ಸಿ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ ಐದು ತಿಂಗಳು ಪ್ರಾಯೋಗಿಕ ಶಿಕ್ಷಣ ಪಡೆದವರನ್ನು ಪ್ರಾಥಮಿಕ ಶಾಲಾ ಉಪಾಧ್ಯಾಯರಾಗಲು ಅರ್ಹರೆಂದು ಸರ್ಕಾರದವರು ಘೋಷಿಸಿರುವುದು ನಿಜವೇ?

ಆ) ಹಾಗಿದ್ದಲ್ಲಿ, ೨೯-೧೦-೧೯೮೫ ರಂತೆ ದ್ವಿತೀಯ ಪಿ.ಯು.ಸಿ. ಪಾಸಾದ ೧೨ ತಿಂಗಳು ಪ್ರಾಯೋಗಿಕ ಶಿಕ್ಷಣ ಪಡೆದಿರಬೇಕೆಂದು ತಿದ್ದುಪಡಿಯಿಂದ ಅನೇಕ ಮಂದಿ ೫ ತಿಂಗಳ ತರಬೇತಿ ಹೊಂದಿರುವವರಿಗೆ ತೊಂದರೆಯಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರದವರು ಕೈಕೊಂಡ ಕ್ರಮವೇನು?

ಶ್ರೀ ಎಂ. ರಘುಪತಿ (ಮಾನ್ಯ ಶಿಕ್ಷಣ ಮಂತ್ರಿಗಳು).—

ಅ) ಆ ರೀತಿ ಹೊರಡಿಸಿದ್ದ ಆದೇಶವನ್ನು ವಾಪಸ್ಸು ಪಡೆಯಲಾಗಿದೆ.

ಆ) ಹೌದು.

ಇ) ಸರ್ಕಾರವು ಈಗಾಗಲೇ ಆದೇಶವನ್ನು ಮಾರ್ಪಡಿಸಿ ಸದರಿ ೧೨ ತಿಂಗಳ ಇಂಟರ್ನ್‌ಶಿಪ್ ಕೋರ್ಸನ್ನು ೧೯೮೬-೮೭ ರಿಂದ ಜಾರಿಗೆ ಬರುವಂತೆ ಹೊರಡಿಸಿದೆ.

ಔರಾದ್ ತಾಲ್ಲೂಕಿನಲ್ಲಿ ನಿರ್ಮಿಸಲಾದ ಶಾಲಾ ಕಟ್ಟಡಗಳ ಬಗ್ಗೆ.

೧೫೫೭. ಶ್ರೀ ಗುರುಪಾದಪ್ಪ (ನಾಗಮಾರಹಳ್ಳಿ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ೧೯೮೫-೮೬, ೧೯೮೬-೮೭, ೧೯೮೭-೮೮ನೇ ಸಾಲಿನಲ್ಲಿ ಔರಾದ್ ತಾಲ್ಲೂಕಿನಲ್ಲಿ ಎಷ್ಟು ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳ ಕಟ್ಟಡಗಳನ್ನು ಕಟ್ಟಲಾಗಿದೆ ಹಾಗೂ ಆವ ಯಾವ ಹಂತದಲ್ಲಿದೆ.

ಆ) ಇವುಗಳಲ್ಲಿ ಶಾಲೆ ನಡೆಯುವ ಸ್ಥಿತಿಯಲ್ಲಿರುವ ಹಾಗೂ ನಡೆಸಲಾರದ ಸ್ಥಿತಿಯಲ್ಲಿರುವ ಶಾಲೆಗಳ ಸಂಖ್ಯೆ ಎಷ್ಟು?

ಇ) ಔರಾದ್ ತಾಲ್ಲೂಕಿನಲ್ಲಿ ಶಾಲೆಗಳು ಇಲ್ಲದಿರುವ ಗ್ರಾಮ ಹಾಗೂ ತಾಂಡಗಳ ಸಂಖ್ಯೆ ಎಷ್ಟು ಹಾಗೂ ಶಿಕ್ಷಕರು ಇಲ್ಲದ ಶಾಲೆಗಳ ಸಂಖ್ಯೆ ಎಷ್ಟು?

ಶ್ರೀ ಎಂ. ರಘುಪತಿ (ಶಿಕ್ಷಣ ಸಚಿವರು).—

ಅ) ಔರಾದ್ ತಾಲ್ಲೂಕಿನಲ್ಲಿ ಪ್ರಾಥಮಿಕ ಶಾಲಾ ಕಟ್ಟಡಗಳ ವಿವರ ಈ ಕೆಳಕಂಡಂತೆ ನಮೂದಿಸಿರುತ್ತೆ.—

	ನಿರ್ಮಾಣಕ್ಕೆ ತೆಗೆದುಕೊಂಡ ಪ್ರಾಥಮಿಕ ಶಾಲೆಗಳ ಸಂಖ್ಯೆ	ಪೂರ್ಣಗೊಂಡ ಪ್ರಾಥಮಿಕ ಶಾಲಾ ಕೊಠಡಿಗಳ ಸಂಖ್ಯೆ	ಪ್ರಾಥಮಿಕ ಶಾಲೆಗಳು ಅಪೂರ್ಣವಾಗಿದ್ದರೆ ಅವುಗಳ ಹಂತ	ಪ್ರೌಢ ಶಾಲೆಗಳ ನಿರ್ಮಾಣ ತೆಗೆದುಕೊಂಡ ಶಾಲೆಗಳ ಸಂಖ್ಯೆ
೧೯೮೩-೮೪	೨೫	೨೩	೧ ಲೆಂಟಲ್ ಹಂತ ೧ ರೂಫ್ ಹಂತ	ಇಲ್ಲ
			ಒಟ್ಟು ೨	
೧೯೮೪-೮೫	೬೯	೩೬	೨೪ ರೂಫ್ ಹಂತ ೪ ಬೇಸ್‌ಮೆಂಟ್ ಹಂತ ೨ ಅಡಿಪಾಯ ೩ ಕಿಟಕಿಯ ಹಂತ	ಇಲ್ಲ
			ಒಟ್ಟು ೩೩	
೧೯೮೫-೮೬	೩	—	೩ ರೂಫ್ ಲೆವೆಲ್	ಇಲ್ಲ

ಆ) ೧ ಸುಸ್ಥಿತಿಯಲ್ಲಿರುವ ಶಾಲೆಗಳ ಸಂಖ್ಯೆ ೫೭
೨ ದುಃಸ್ಥಿತಿಯಲ್ಲಿರುವ ಶಾಲೆಗಳ ಸಂಖ್ಯೆ ೪೦

ಇ) ೧ ಶಾಲೆಗಳು ಇಲ್ಲದಿರುವ ಗ್ರಾಮಗಳ ಸಂಖ್ಯೆ ೬
೨ ಶಾಲೆಗಳು ಇಲ್ಲದಿರುವ ತಾಂಡಗಳ ಸಂಖ್ಯೆ ೧
೩ ಶಿಕ್ಷಕರಿಲ್ಲದಿರುವ ಶಾಲೆಗಳ ಸಂಖ್ಯೆ ... ಇಲ್ಲ

ನಿಪ್ಪಾಣಿ ಪುರಸಭಾ ಕ್ಷೇತ್ರದಲ್ಲಿರುವ ಕನ್ನಡ ಮರಾಠಿ ಮತ್ತು ಉರ್ದು ಶಾಲೆಗಳು

೧೪೨೭. ಶ್ರೀಮತಿ ಶಕುಂತಲಾ ತುಕಾರಾಮ ಚೌಗುಲೆ (ಚಿಕ್ಕೋಡಿ).— ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ನಿಪ್ಪಾಣಿ ಪುರಸಭಾ ಕ್ಷೇತ್ರದಲ್ಲಿರುವ ಕನ್ನಡ, ಮರಾಠಿ ಹಾಗೂ ಉರ್ದು ಶಾಲೆಗಳೆಷ್ಟು?

ಆ) ಈ ಶಾಲೆಗಳಿಗೆ ಸ್ವಂತ ಸರ್ಕಾರಿ ಕಟ್ಟಡಗಳಿವೆಯೆ?

ಇ) ಹಾಗಿಲ್ಲದಿದ್ದಲ್ಲಿ ಸರ್ಕಾರದವರು ಕಟ್ಟಿಸಿಕೊಡುವ ವ್ಯವಸ್ಥೆ ಮಾಡುವರೆ?

ಶ್ರೀ ಎಂ. ರಘುಪತಿ (ಶಿಕ್ಷಣ ಸಚಿವರು).—

ಅ) ೧ ಕನ್ನಡ ... ಹಿರಿಯ—೬
... ಕಿರಿಯ—೨
೨ ಮರಾಠಿ ... ಹಿರಿಯ—೭
... ಕಿರಿಯ—೩
೩ ಉರ್ದು ... ಹಿರಿಯ—೩
.. ... ಕಿರಿಯ—೦
ಒಟ್ಟು—೧೯